# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 172 (25) |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13-09-2022 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿ ಹೊಸದಾಗಿ ಘೋಷಿಸಿರುವ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಕಲಬುರಗಿ ಜಿಲ್ಲೆಯ ಕಾಳಗಿ, ಕಮಲಾಪೂರ ಮತ್ತು ಯಡ್ರಾಮಿ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ.<br><br>**ಎಸ್.ಎಫ್.ಸಿ**<br>ಸದರಿ ಪಟ್ಟಣ ಪಂಚಾಯಿತಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಎಸ್.ಎಫ್.ಸಿ ಮುಕ್ತನಿಧಿ ಮತ್ತು ಎಸ್.ಎಫ್.ಸಿ ಕುಡಿಯುವ ನೀರಿನ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲಾಗಿದೆ.<br><br>**15ನೇ ಹಣಕಾಸು ಆಯೋಗದ ಅನುದಾನ:**<br>ಕಲಬುರಗಿ ಜಿಲ್ಲೆಯಲ್ಲಿ ಹೊಸದಾಗಿ ಘೋಷಿಸಿರುವ ಪಟ್ಟಣ ಪಂಚಾಯತಿ ಮತ್ತು ಪುರಸಭೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು 15ನೇ ಹಣಕಾಸು ಆಯೋಗದ ಅನುದಾನವನ್ನು ಆಯವ್ಯಯ ಹಂಚಿಕೆ ಸಮಯದಲ್ಲಿ ಮೇಲ್ದರ್ಜೆಗೇರಿಸಿದ ಪಟ್ಟಣ ಪಂಚಾಯಿತಿ / ಪುರಸಭೆಗಳನ್ನು ಸೇರಿಸಿಕೊಂಡು ಹಂಚಿಕೆ ಮಾಡಿ, ಬಿಡುಗಡೆಗೊಳಸಲು ಕ್ರಮವಹಿಸಲಾಗಿದೆ.<br><br>**ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆ:**<br>ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿ ಕಲಬುರಗಿ ಜಿಲ್ಲೆಯ ಹೊಸದಾಗಿ ಘೋಷಿಸಿದ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಯನ್ನು ಸೇರಿದ್ದಂತೆ, 1 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ 287 ನಗರ ಸ್ಥಳೀಯ ಸಂಸ್ಥೆಗಳನ್ನು ಆಯ್ಕೆ ಮಾಡಿದೆ. ಸದರಿ ಪಟ್ಟಣಗಳಲ್ಲಿ ಕುಡಿಯುವ ನೀರು ಸರಬರಾಜು. ಜಲಮೂಲಗಳ ಪುನಶ್ಚೇತನ ಹಾಗೂ ಹಸಿರು ಜಾಗ ಮತ್ತು ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಿಯಾ ಯೋಜನೆ ತಯಾರಿಸಲಾಗುತ್ತಿದೆ.<br><br>**ನಗರೋತ್ಥಾನ:**<br>**ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)**<br>ಕಲಬುರಗಿ ಜಿಲ್ಲೆಯಲ್ಲಿ ಹೊಸದಾಗಿ ಘೋಷಿಸಿರುವ ಪಟ್ಟಣ ಪಂಚಾಯತಿ ಕಾಳಗಿ, ಕಮಲಾಪೂರ ಹಾಗೂ ಯಡ್ರಾಮಿ |

ಕಾರ್ಯಾಲಯಕ್ಕೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರದಿಂದ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ಯಡಿ ಅನುದಾನವನ್ನು ಹಂಚಿಕೆ ಮಾಡಿ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ.

**ಸ್ವಚ್ಛ ಭಾರತ ಮಿಷನ್:**

ಕಲಬುರಗಿ ಜಿಲ್ಲೆಯಲ್ಲಿ ಹೊಸದಾಗಿ ಮೇಲ್ದರ್ಜೆಗೊಂಡಿರುವ ಕಾಳಗಿ, ಕಮಲಾಪೂರ ಹಾಗೂ ಯಡ್ರಾಮಿ ಪಟ್ಟಣ ಪಂಚಾಯತಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ತಲಾ ರೂ.20.00ಲಕ್ಷಗಳ ಅನುದಾನವನ್ನು ಘನತ್ಯಾಜ್ಯ ವಸ್ತುಗಳ ಸಂಗ್ರಹಣೆಗಾಗಿ ಅಗತ್ಯವಿರುವ ವಾಹನಗಳನ್ನು ಖರೀದಿಸಲು ಈಗಾಗಲೆ ಬಿಡುಗಡೆ ಮಾಡಲಾಗಿರುತ್ತದೆ.

ಆ) ಹೊಸದಾಗಿ ಘೋಷಿಸಿದ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಿಗೆ ಕಳೆದ 2 ವರ್ಷಗಳಲ್ಲಿ ಮಂಜೂರಾದ ಅನುದಾನ ಎಷ್ಟು; ಪಂಚಾಯಿತಿ ಕಾರ್ಯಾಲಯಕ್ಕಾಗಿ ಸ್ವಂತ ಕಟ್ಟಡ ಮತ್ತು ಮೂಲ ಸೌಕರ್ಯಗಳನ್ನು ಯಾವ ಕಾಲಮಿತಿಯಲ್ಲಿ ಪೂರೈಸಲಾಗುವುದು;

ಕಳೆದ 2 ವರ್ಷಗಳಲ್ಲಿ ಹೊಸದಾಗಿ ಘೋಷಿಸಿದ ಕಲಬುರಗಿ ಜಿಲ್ಲೆಯ ಪಟ್ಟಣ ಪಂಚಾಯಿತಿಗಳಿಗೆ ಮತ್ತು ಪುರಸಭೆಗಳಿಗೆ ಈ ಕೆಳಕಂಡಂತೆ 15ನೇ ಹಣಕಾಸು ಆಯೋಗದ ಅನುದಾನವನ್ನು ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗಿದೆ.

(ರೂ. ಲಕ್ಷಗಳಲ್ಲಿ)

| ನಗರ ಸ್ಥಳೀಯ ಸಂಸ್ಥೆ ಹೆಸರು | 2020-21 | 2021-22 | ಒಟ್ಟು |
|---|---|---|---|
| ಕಾಳಗಿ | 140.00 | 103.00 | 253.00 |
| ಕಮಲಾಪುರ | - | 105.00 | 105.00 |
| ಯಡ್ರಾಮಿ | - | 89.00 | 89.00 |

**ಎಸ್.ಎಫ್.ಸಿ**

ಕಳೆದ 2 ವರ್ಷಗಳಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಹೊಸದಾಗಿ ಘೋಷಿಸಿರುವ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಎಸ್.ಎಫ್.ಸಿ ಮುಕ್ತನಿಧಿ ಮತ್ತು ಎಸ್.ಎಫ್.ಸಿ ಕುಡಿಯುವ ನೀರು ಯೋಜನೆಯಡಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ಎಸ್.ಎಫ್.ಸಿ ಮುಕ್ತನಿಧಿ ಮತ್ತು ಎಸ್.ಎಫ್.ಸಿ ಕುಡಿಯುವ ನೀರು ಯೋಜನೆಯಡಿ ಬಿಡುಗಡೆಯಾದ ಅನುದಾನದ ವಿವರ

| ಕ್ರ.ಸಂ | ನಗರ ಸ್ಥಳೀಯ ಸಂಸ್ಥೆಯ ಹೆಸರು | ಎಸ್.ಎಫ್.ಸಿ ಮುಕ್ತನಿಧಿ | | ಎಸ್.ಎಫ್.ಸಿ ಕುರಿಯುವ ನೀರು ಯೋಜನೆ | |
|---|---|---|---|---|---|
| | | 2020-21 | 2021-22 | 2020-22 | 2021-22 |
| 1 | ಕಾಳಗಿ ಪಟ್ಟಣ ಪಂಚಾಯಿತಿ | 32.89 | 32.25 | - | 2.50 |
| 2 | ಕಮಲಾಪೂರ ಪಟ್ಟಣ ಪಂಚಾಯಿತಿ | 0.00 | 22.00 | - | 2.50 |
| 3 | ಯಡ್ರಾಮಿ ಪಟ್ಟಣ ಪಂಚಾಯಿತಿ | 0.00 | 26.25 | - | 2.50 |
| ಒಟ್ಟು | | 32.89 | 80.50 | 0 | 7.50 |

**ನಗರೋತ್ಥಾನ:**

**ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)**

ಸದರಿ ಯೋಜನೆಯಡಿ ಕಲಬುರಗಿ ಜಿಲ್ಲೆಯ ಕಾಳಗಿ, ಕಮಲಾಪೂರ ಹಾಗೂ ಯಡ್ರಾಮಿ ಪಟ್ಟಣ ಪಂಚಾಯತಿಗಳಿಗೆ ಹಂಚಿಕೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ನಗರ ಸ್ಥಳೀಯ ಸಂಸ್ಥೆಯ ಹೆಸರು | ಹಂಚಿಕೆ ಮೊತ್ತ | ಕ್ರಿಯಾಯೋಜನೆ ಅನುಮೋದನೆ ಮೊತ್ತ |
|---|---|---|---|
| 1 | ಕಾಳಗಿ ಪಟ್ಟಣ ಪಂಚಾಯತಿ | 500.00 | 425.00 |
| 2 | ಕಮಲಾಪೂರ ಪಟ್ಟಣ ಪಂಚಾಯತಿ | 500.00 | 425.00 |
| 3 | ಯಡ್ರಾಮಿ ಪಟ್ಟಣ ಪಂಚಾಯತಿ | 500.00 | 425.00 |

**ಸ್ವಚ್ಛ ಭಾರತ ಮಿಷನ್:**

ಕಲಬುರಗಿ ಜಿಲ್ಲೆಯಲ್ಲಿ ಹೊಸದಾಗಿ ಮೇಲ್ದರ್ಜೆಗೊಂಡಿರುವ ಕಾಳಗಿ, ಕಮಲಾಪೂರ ಹಾಗೂ ಯಡ್ರಾಮಿ ಪಟ್ಟಣ ಪಂಚಾಯತಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ತಲಾ ರೂ 20 ಲಕ್ಷಗಳ ಅನುದಾನವನ್ನು ಘನತ್ಯಾಜ್ಯ ವಸ್ತುಗಳ ಸಂಗ್ರಹಣೆಗಾಗಿ ಅಗತ್ಯವಿರುವ ವಾಹನಗಳನ್ನು ಖರೀದಿಸಲು ಈಗಾಗಲೆ ಬಿಡುಗಡೆ ಮಾಡಲಾಗಿರುತ್ತದೆ.

| | | |
|---|---|---|
| ಇ) | ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಲ್ಲಿ ಅವಶ್ಯವಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಮುಂದಾಗಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ: | ಕರ್ನಾಟಕ ಲೋಕಸೇವಾ ಆಯೋಗದಿಂದ ಗ್ರೂಪ್ ಬಿ ಮತ್ತು ಗ್ರೂಪ್ ಸಿ ವೃಂದದ (ಹೈದ್ರಾಬಾದ್ ಕರ್ನಾಟಕ ಪ್ರದೇಶದ ಒಳಗೊಂಡು) 1126 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ಸ್ವೀಕೃತವಾಗಿದ್ದು, ಅದರಲ್ಲಿ ಒಟ್ಟು 817 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿ, 784 ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಉಳಿದ 309 ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆಯಾದ ಪೋಲೀಸ್ ವರದಿ, ಸಿಂಧುತ್ವದ ನೈಜತ್ವ ಪರಿಶೀಲನೆ, ಶೈಕ್ಷಣಿಕ ದಾಖಲಾತಿಗಳ ನೈಜತೆ ಪರಿಶೀಲನೆ ಚಾಲ್ತಿಯಲ್ಲಿರುತ್ತದೆ ಮತ್ತು ಕೆಲವು ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆಗೆ ಗೈರು ಹಾಜರಾಗಿರುವುದು, ಹುದ್ದೆ ನಿರಾಕರಿಸಿರುವುದು ಮತ್ತು ಇತರ ಇಲಾಖೆಯ ಹುದ್ದೆಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಇದಲ್ಲದೆ, ನೇರನೇಮಕಾತಿಯಡಿ ಖಾಲಿ ಇರುವ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಮೂಲ ವೃಂದದ 357 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಅನುಮೋದನೆ ಕೋರಲಾಗಿದೆ. |

| | | |
|---|---|---|
| | | ಹೈದ್ರಾಬಾದ್-ಕರ್ನಾಟಕ ಪ್ರದೇಶದ 24 ಹುದ್ದೆಗಳನ್ನು ಭರ್ತಿ ಮಾಡಲು ಸಹ ಕ್ರಮವಹಿಸಲಾಗಿದೆ.<br><br>ಮುಂದುವರೆದು, ಮುಂಬಡ್ತಿ ಖೋಟಾದಡಿಯಲ್ಲಿ ಖಾಲಿ ಇರುವ ಗ್ರೂಪ್ ಬಿ" ಮತ್ತು "ಸಿ" ವೃಂದದ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. ಸರ್ಕಾರದ ಆದೇಶಗಳನುಸಾರ ಕೆಲವು ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಮತ್ತು ನೇರ ಪಾವತಿಯಡಿ ಪಡೆಯಲು ಅವಕಾಶವಿದ್ದು, ಅದರಂತೆ ಹೊರಗುತ್ತಿಗೆ ಮತ್ತು ನೇರ ನೇಮಕಾತಿಯಡಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. |
| ಈ) | ಕಲಬುರಗಿ ಜಿಲ್ಲೆಯ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ ಯೋಜನೆ ಅಡಿ ಯಾವ ಕಾರ್ಯ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ; ಇದಕ್ಕಾಗಿ ಕಳೆದ ಎರಡು ವರ್ಷಗಳಲ್ಲಿ ಜಿಲ್ಲೆಗೆ ಬಿಡುಗಡೆ ಮಾಡಲಾದ ಅನುದಾನ ಎಷ್ಟು? (ವಿವರ ನೀಡುವುದು) | ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯಡಿ ಹೊಸದಾಗಿ ಮೇಲ್ದರ್ಜೆಗೊಂಡಿರುವ ಕಾಳಗಿ, ಕಮಲಾಪೂರ ಹಾಗೂ ಯಡ್ರಾಮಿ ಪಟ್ಟಣ ಪಂಚಾಯತಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ತಲಾ ರೂ.20.00ಲಕ್ಷಗಳ ಅನುದಾನವನ್ನು ಘನತ್ಯಾಜ್ಯ ವಸ್ತುಗಳ ಸಂಗ್ರಹಣೆಗಾಗಿ ಅಗತ್ಯವಿರುವ ವಾಹನಗಳನ್ನು ಖರೀದಿಸಲು ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ.<br><br>ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯಡಿ ಈ ಕೆಳಕಂಡ ಘಟಕಗಳನ್ನು ಒಳಗೊಂಡಿರುತ್ತದೆ.<br>• ಶೌಚಾಲಯ ರಹಿತ ಮನೆಗಳಿಗೆ ಶೌಚಾಲಯ ನಿರ್ಮಾಣ ಮಾಡುವುದು.<br>• ನಗರದಲ್ಲಿ ಅಗತ್ಯವಿರುವ ಕಡೆ ಸಾರ್ವಜನಿಕ ಶೌಚಾಲಯ/ಸಮುದಾಯ ಶೌಚಾಲಯ ನಿರ್ಮಾಣ<br>• ಘನತ್ಯಾಜ್ಯ ವಸ್ತುಗಳ ವೈಜ್ಞಾನಿಕ ನಿರ್ವಹಣೆಗೆ ಅಗತ್ಯವಿರುವ ವಾಹನ ಯಂತ್ರೋಪಕರಣಗಳ ಖರೀದಿ, ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆ<br>• I.E.C ಚಟುವಟಿಕೆಗಳನ್ನು ಕೈಗೊಳ್ಳುವುದು<br>• ಸಾಮರ್ಥ್ಯಾಭಿವೃದ್ಧಿ<br><br>ಸದರಿ ಯೋಜನೆಯಡಿ ಕಳೆದ ಎರಡು ವರ್ಷಗಳಲ್ಲಿ ಆಯಾ ನಗರಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಸಂಸ್ಥೆವಾರು ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ (ಪ್ರತಿ ಲಗತ್ತಿಸಿದೆ). |

ಸಂಖ್ಯೆ:ನಅಇ 270 ಎಸ್‌ಎಫ್‌ಸಿ 2022

N. Nagaraj

**[ಎನ್. ನಾಗರಾಜ್ (ಎಂ.ಟಿ.ಬಿ)]**
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಅನುಬಂಧ

ಅನುಬಂಧ-1

(ರೂ. ಲಕ್ಷಗಳಲ್ಲಿ)

| ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯಡಿಯಲ್ಲಿ ಕಳೆದ 2 ವರ್ಷಗಳಲ್ಲಿ ಬಿಡುಗಡೆ ಮಾಡಿಲಾಗಿರುವ ಅನುದಾನದ ವಿವರ | | | | |
|---|---|---|---|---|
| ಕ್ರ.ಸಂ | ನಗರ ಸ್ಥಳೀಯ ಸಂಸ್ಥೆಯ ಹೆಸರು | 2020-21 | | 2021-22 |
| | | ಐ.ಇ.ಸಿ | ಘನತ್ಯಾಜ್ಯ ನಿರ್ವಹಣೆ | ಘನತ್ಯಾಜ್ಯ ನಿರ್ವಹಣೆ |
| 1 | ಕಲಬುರ್ಗಿ | 30.00 | 0.00 | 71.760 |
| 2 | ಶಾಹಬಾದ್ | 10.00 | 74.26 | 0.000 |
| 3 | ಅಲ್ನದ್ | 5.00 | 51.22 | 0.003 |
| 4 | ಸೇಡಂ | 5.00 | 151.95 | 0.000 |
| 5 | ವಾಡಿ | 5.00 | 48.09 | 0.002 |
| 6 | ಚಿತ್ತಪುರ್ | 5.00 | 226.28 | 68.670 |
| 7 | ಅಫ್ಜಲ್‌ಪುರ್ | 5.00 | 23.49 | 0.001 |
| 8 | ಜೆವರಗಿ | 5.00 | 149.06 | 0.000 |
| 9 | ಚಿಂಚೋಳಿ | 5.00 | 92.01 | 0.000 |
| 10 | ಕಾಳಗಿ | 0.00 | 0.00 | 20.000 |
| 11 | ಕಮಲಾಪೂರ | 0.00 | 0.00 | 20.000 |
| 12 | ಯಡ್ರಾಮಿ | 0.00 | 0.00 | 20.000 |
| | ಮೊತ್ತ ರೂ. | 75.00 | 816.36 | **200.44** |
| | ಒಟ್ಟು ಮೊತ್ತ | 1091.80 | | |

Executive Engineer
Directorate of Municipal Administration
Bangalore.

| ಕ್ರ.ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ |
|---|---|---|
| 6 | ವಾರ್ಡ್ ನಂ:13 ಮೈಸೂರು ರಸ್ತೆಯಿಂದ ವೀರಭದ್ರಸ್ವಾಮಿ ದೇವಸ್ಥಾನದ ಮುಂಭಾಗದ ಮುಖಾಂತರ ಮುಳ್ಳಸೆಳ ಆಂಜನೇಯಸ್ವಾಮಿ ದೇವಸ್ಥಾನದವರೆಗೆ ರಸ್ತೆ ಅಭಿವೃದ್ಧಿ, ವಾರ್ಡ್ ನಂ:05ರಲ್ಲಿ ಪೊಲೀಸ್ ಸ್ಟೇಷನ್ ಹಿಂಭಾಗ ಮತ್ತು ಎನ್ ಎಚ್ ರಸ್ತೆಯಿಂದ ಗೊಬ್ಬರದ ಅಂಗಡಿ ರಮೇಶನ ಅಂಗಡಿಯ ಮುಂದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ವಾರ್ಡ್ ನಂ:07ರಲ್ಲಿ ಬೆಟ್ಟದ ಮಲ್ಲೇನಹಳ್ಳಿ ರಸ್ತೆಯಿಂದ(ಹುಚ್ಚಮ್ಮ ದೇವಸ್ಥಾನದಿಂದ) ನಗರೇಶ್ವರ ದೇವಸ್ಥಾನದ ಮುಖಾಂತರ ಮಾರಮ್ಮ ಸರ್ಕಲ್ ವರೆಗೆ ರಸ್ತೆ ಅಭಿವೃದ್ಧಿ, ಯೋಗಾನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗ ಮತ್ತು ಪಕ್ಕ, ಒಕ್ಕಲಿಗ ಸಮುದಾಯ ಭವನದ ಹಿಂಭಾಗ ರಸ್ತೆ ಅಭಿವೃದ್ಧಿ | 73.00 |
| 7 | ವಾರ್ಡ್.ನಂ-16, ವಾರ್ಡ್ ನಂ:02 ಹಾಗೂ ವಾರ್ಡ್ ನಂ:23ರ ಕೆ ಮಲ್ಲೇನಹಳ್ಳಿಯಲ್ಲಿ ಅಡ್ಡರಸ್ತೆಗಳ ಅಭಿವೃದ್ಧಿ | 50.00 |
| 8 | ನಾಗಮಂಗಲ ಪುರಸಭೆ ವ್ಯಾಪ್ತಿಯ ವಾರ್ಡ್ ನಂ:21ರಲ್ಲಿ ಮಂಡ್ಯ ರಸ್ತೆಯಿಂದ ಗದ್ದೆಭೂವನಹಳ್ಳಿವರೆಗೆ. ವಾರ್ಡ್ ನಂ:23ರಲ್ಲಿ ಮಾಯಣ್ಣ ಗೌಡನಕೊಪ್ಪಲಿನಲ್ಲಿ ರಸ್ತೆ ಅಭಿವೃದ್ಧಿ | 62.00 |
| 9 | ವಾರ್ಡ್ ನಂ-18ರಲ್ಲಿ ಎನ್ ಎಚ್ ರಸ್ತೆಯಿಂದ ಮದಲಹಳ್ಳಿಗೆ ಹೋಗುವ ಕಾಲುವೆ ಪಕ್ಕದ ರಸ್ತೆ ಹಾಗೂ ಮದಲಹಳ್ಳಿ ಅಡ್ಡರಸ್ತೆಗಳ ಅಭಿವೃದ್ಧಿ ಹಾಗೂ ಪಿ.ಡಬ್ಲ್ಯೂಡಿ ಕಛೇರಿ ಹಿಂಭಾಗದ ಅಡ್ಡರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಬಳಪದ ಮಂಟಿಕೊಪ್ಪಲು ಅಡ್ಡರಸ್ತೆಗಳ ಅಭಿವೃದ್ಧಿ, ತೊಳಲಿಯಲ್ಲಿ ಮತ್ತು ಚೌಡೇನಹಳ್ಳಿ ಅಡ್ಡರಸ್ತೆಗಳ ಅಭಿವೃದ್ಧಿ | 85.00 |
| 10 | ವಾರ್ಡ್ ನಂ:17ರಲ್ಲಿ ಅಡ್ಡರಸ್ತೆಗಳ ಅಭಿವೃದ್ಧಿ, ವಾರ್ಡ್ ನಂ:02ರಲ್ಲಿ ಅಡ್ಡ ರಸ್ತೆಗಳ ಅಭಿವೃದ್ಧಿ | 58.72 |
| | ಚರಂಡಿ ನಿರ್ಮಾಣ ಕಾಮಗಾರಿಗಳು | |
| 11 | ನಾಗಮಂಗಲ ಪುರಸಭೆ ವ್ಯಾಪ್ತಿಯ ವಾರ್ಡ್ ನಂ:04ರಲ್ಲಿ ಟೀಚರ್ಸ್ ಕಾಲೋನಿ, ಮದಲಹಳ್ಳಿ ಪುಟ್ಟರಾಜುರವರ ಮನೆಯಿಂದ ಪೊಲೀಸ್ ಕೆಂಪಣ್ಣರವರ ಮನೆಯ ಮುಂಭಾಗದಿಂದ ಕುದುರೆ ಡಾಬಾದವರೆಗೆ. ವಾರ್ಡ್ ನಂ:16ರಲ್ಲಿ ಹಾಗೂ ವಾರ್ಡ್ ನಂ:07ರಲ್ಲಿ ಕೆಂಪೇಗೌಡರ ಮನೆಯಿಂದ ರಾಮಕೃಷ್ಣ ಮನೆಯವರೆಗೆ ಹಾಗೂ ಬೆಟ್ಟದ ಮಲ್ಲೇನಹಳ್ಳಿ ರಸ್ತೆಯಿಂದ ಶಿವರಾಮು ಮನೆಯವರೆಗೆ ಮತ್ತು ಒಕ್ಕಲಿಗ ಸಮುದಾಯ ಭವನದ ಮುಂಭಾಗ ಹಾಗೂ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಹಿಂಭಾಗ ಚರಂಡಿ ನಿರ್ಮಾಣ ಕಾಮಗಾರಿ. | 95.00 |
| 12 | ಬ್ರಾಹ್ಮಣರ ಸ್ಮಶಾನದವರೆಗೆ ತಡೆಗೋಡೆ ನಿರ್ಮಾಣ ಹಾಗೂ ಕಾಂಪೌಂಡ್ ಅಭಿವೃದ್ಧಿ ಕಾಮಗಾರಿ ಹಾಗೂ ವಾರ್ಡ್ ನಂ:17ರಲ್ಲಿ ಈಶ್ವರಪ್ಪ ಮನೆಯಿಂದ ಶಿವರಾಮೇಗೌಡರ ಮನೆಯವರೆಗೆ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ವಾರ್ಡ್ ನಂ:8ರಲ್ಲಿ ಪಡುವಲಪಟ್ಟಣ ರಸ್ತೆಯಿಂದ ನರಸಿಂಹ ಮನೆಯವರೆಗೆ ಚರಂಡಿ ಅಭಿವೃದ್ಧಿ, ವಾರ್ಡ್ ನಂ:8ರಲ್ಲಿ ಮಾರುತಿ ನಗರ ಅಡ್ಡರಸ್ತೆಗಳ ಚರಂಡಿ ಅಭಿವೃದ್ಧಿ ಕಾಮಗಾರಿ | 67.31 |
| | ಒಟ್ಟು | 698.39 |

ಮುಖ್ಯ ಅಭಿಯಂತರರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು